(ಇಂದು ದಿನಾಂಕಃ 25–06–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ-

1) ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದ ಪಟ್ಟಂತೆ ಪುರಸಭೆ ದಾಖಲೆಯನ್ನು ದಾವಾ ಸಲ್ಲಿಸುವಾಗ ಹಚ್ಚಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ನಾನು ದಾವಾ ದಾಖಲು ಮಾಡುವ ಸಮಯದಲ್ಲಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ ಆದರೆ ದಾಖಲೆಗಳಲ್ಲಿ ಇರುವುದಿಲ್ಲ.

2) ದಾವಾ ಆಸ್ತಿಯು ಜನತಾ ನಿವೇಶನ ಅಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ಕಾರದಿಂದ 2 ನೇ ಪ್ರತಿವಾದಿಯ ಮೂಲಕ 1 ನೇ ಪ್ರತಿವಾದಿಗೆ ಮಂಜೂರಾಗಿದೆ ಅಂದರೆ ಸರಿಯಲ್ಲ. ಸಾಕ್ಷಿಗೆ ಈಗ ತಮ್ಮ ವಾದ ಪತ್ರದ 4 ನೇ ಕಂಡಿಕೆಯನ್ನು ತೋರಿಸಿ ಅದರಲ್ಲಿ ದಾವಾ ಆಸ್ತಿಯು 2 ನೇ ಪ್ರತಿವಾದಿಯಿಂದ 1 ನೇ ಪ್ರತಿವಾದಿಗೆ ಮಂಜೂರಾಗಿರುತ್ತದೆ ಎಂದು ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಹೇಳಿ ಬರೆಸಿರುತ್ತೇನೆ ಅಂದರೆ ಸರಿಯಲ್ಲ.

3) ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದ ಪತ್ರದ 4 ನೇ ಕಂಡಿಕೆಯ ವಿಷಯವನ್ನು ನಾನು ಹೇಳಿ ಬರೆಸಿಲ್ಲ. ದಾವಾ ಆಸ್ತಿ ಮಂಜೂರಾದ ನಂತರದಲ್ಲಿ 1 ನೇ ಪ್ರತಿವಾದಿಯು ಒಂದು ಭಾಗದಲ್ಲಿ ಮನೆ ನಿರ್ಮಾಣ ಮಾಡಿ ಉಳಿದ ಭಾಗವನ್ನು ಖಾಲಿ ಇಟ್ಟಿರುತ್ತಾನೆ ಎಂದರೆ ಸರಿ.

4) 1 ನೇ ಪ್ರತಿವಾದಿಯ ಮಕ್ಕಳು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡು ಮತ್ತು ಹೆಣ್ಣು ಮಕ್ಕಳು ಕೂಡಿ ವಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ತನ್ನ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಸಿಕೊಟ್ಟಿದ್ದು ಆತನ ಗಂಡು ಮಕ್ಕಳು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಅಣ್ಣಿಗೇರಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಕೊಡೆ ರಿಪೇರಿ ಮಾಡುವುದು, ಜೋಳ ಹಾಗೂ ಗೋದಿ ಹಿಟ್ಟು ಜರಡಿ ಮಾಡುತ್ತಾ ಜೀವನ ಸಾಗಿಸುತ್ತಾ ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆತನು ಊರಿನಲ್ಲಿ ಸುತ್ತಾಡುತ್ತಾ ಬಾಟಲಿಗಳನ್ನು, ಕೂದಲಗಳನ್ನು ತೆಗೆದುಕೊಂಡು ಸಣ್ಣ ಸಣ್ಣ ಉದ್ಯೋಗ ಮಾಡುತ್ತಾ ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

5) ದಾವಾ ಸಲ್ಲಿಸುವ 8 ವರ್ಷಗಳ ಪೂರ್ವದಲ್ಲಿ 1 ನೇ ಪ್ರತಿವಾದಿಗೆ ಹೃದಯ ನೋವು ಉಂಟಾಗಿ ಆತನ ಮಕ್ಕಳು ಆತನಿಗೆ ಚಿಕಿತ್ಸೆಗೆಂದು ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ ಅಂದರೆ ಸುಳ್ಳು. ಚಿಕಿತ್ಸೆಗೆ ತೆರಳಲು 1 ನೇ ಪ್ರತಿವಾದಿ ಹಾಗೂ ಆತನ ಹೆಂಡತಿಗೆ ಮನೆಯ ದ್ವಾರಕ್ಕೆ ಬೀಗ ಹಾಕಿ ಹೋಗುವ ಪ್ರಸಂಗ ಬಂದಿರುತ್ತದೆ ಅಂದರೆ ಸರಿಯಲ್ಲ.

6) ಅಮೃತಪ್ಪ ಪಲ್ಲೇದ ಎಂಬುವವರು ನನಗೆ ಗೊತ್ತು ಅವರು 1 ನೇ ಪ್ರತಿವಾದಿಯ ಸಂಬಂದಿಕರಾಗಬೇಕು. 1 ನೇ ಪ್ರತಿವಾದಿಯು ಹಾಗೂ ಆತನ ಹೆಂಡತಿಯು ಚಿಕಿತ್ಸೆಗೆ ಬೆಂಗಳೂರಿಗೆ ಹೋಗುವ ಪ್ರಸಂಗ ಬಂದಾಗ ನಾನು ಮನೆಯನ್ನು ನೋಡಿಕೊಳ್ಳುತ್ತೇನೆ ಬೀಗ ಹಾಕಬೇಡಿ ಅಂತಾ ಅಮೃತಪ್ಪರವರಿಂದ 1 ನೇ ಪ್ರತಿವಾದಿಗೆ ಕೋರಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. 1 ನೇ ವಾದಿ ಪಾರ್ವತಮ್ಮ ನನ್ನ ಹೆಂಡತಿಯಾಗಬೇಕು. 1 ನೇ ವಾದಿಯ ಮೂಲಕ ನಾನು 1 ನೇ ಪ್ರತಿವಾದಿಯಿಂದ ಅವರ ಮನೆಯ ಬೀಗವನ್ನು ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಬೆಂಗಳೂರಿಗೆ ತೆರಳುವ ದಿನದಂದು ನಾನು ಹಾಗೂ 1 ನೇ ವಾದಿಯು ಅವರ ಮನೆಗೆ ಹೋಗಿ ಬೀಗವನ್ನು ಪಡೆದುಕೊಂಡು ಮನೆಯನ್ನು ನೋಡಿಕೊಳ್ಳುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

7) 1 ನೇ ಪ್ರತಿವಾದಿಯು ಬೆಂಗಳೂರಿನಿಂದ ಮರಳಿ ಬಂದ ನಂತರ ಮನೆಯ ಬೀಗವನ್ನು ಹಿಂತುರಿಗಿಸುತ್ತೇನೆ ಎಂದು ತಿಳಿಸಿರುತ್ತೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಿನಾಂಕ 08-08-2017 ರಂದು ಬೆಂಗಳೂರಿನಿಂದ ಮರಳಿ ಊರಿಗೆ ಬಂದು ನನ್ನ ಬಳಿ ಆತನ ಮನೆಯ ಬೀಗವನ್ನು ಕೇಳಿಕೊಂಡಾಗ ನಾನು ಎರಡೂ ತಿಂಗಳ ಕಾಲವಕಾಶ ಕೋರಿ ನಂತರ ಬಿಟ್ಟು ಕೊಡುತ್ತೇನೆ ಎಂದು ತಿಳಿಸಿರುತ್ತೇನೆ ಅಂದರೆ ಸರಿಯಲ್ಲ. ನಂತರ ಸುಳ್ಳು ಕಾರಣಗಳನ್ನು ನಮೂದು ಮಾಡಿ ಪ್ರಸ್ತುತ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ

8) ನನ್ನ ವಾದ ಪತ್ರದಲ್ಲಿ 2 ನೇ ಪ್ರತಿವಾದಿಯು ದಾವಾ ಆಸ್ತಿಯ ಮಾಲೀಕರು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸರ್ಕಾರದ ಬಡತನ ರೇಖೆಯಿಂದ ಕೆಳ ಇದ್ದ ಕಾರಣ ಸರ್ಕಾರದವರು 2 ನೇ ಪ್ರತಿವಾದಿಯ ಮೂಲಕ 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅನುಬೋಗಕ್ಕೆ ಮಾತ್ರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಂಜೂರಾತಿಯಲ್ಲಿ 1 ನೇ ಪ್ರತಿವಾದಿಯು 15 ವರ್ಷಗಳ ಕಾಲ ಅದನ್ನು ಪರಬಾರ ಮಾಡಬಾರದು ಎಂದು ಷರತ್ತು ಇರುತ್ತದೆ ಎಂದರೆ ಸರಿ.

9) ದಿನಾಂಕ 18-05-2002 ರಂದು ದಾವಾ ಆಸ್ತಿಯ ದಾಖಲೆಯಲ್ಲಿ 2 ನೇ ಪ್ರತಿವಾಯು ಮಾಲೀಕರು ಎಂದು ನಮೂದು ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯ ಮಾರಾಟ ಮಾಡಲು ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿ. ದಿನಾಂಕ 18-05-2002 ರ ಕಾಗದ ನಮೂದು ಆಗಿರುವುದಿಲ್ಲ. ನಾನು ನಿರ್ದಿಷ್ಟ ಕಾರ್ಯನಿರ್ವಹಣೆಯ ಮೊಕದ್ದಮೆ ದಾವೆಯನ್ನು ಹೂಡಿರುವುದಿಲ್ಲ. ನಾನು 1 ನೇ ಪ್ರತಿವಾದಿಗೆ ಖರೀದಿ ಕಾಗದ ಬಾಕಿ ಹಣ ತೆಗೆದುಕೊಂಡು ಖರೀದಿ ಪತ್ರ ಬರೆದು ಕೊಡುವಂತೆ ಯಾವುದೇ ಲಿಖಿತ ನೋಟಿಸ ನೀಡಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತೇನೆ. ಸದರಿ ವಿಷಯವನ್ನು ನಾನು ನನ್ನ ವಾದ ಪತ್ರದಲ್ಲಿ ನಮೂದು ಮಾಡಿಲ್ಲ

10) ನಾನು 1 ನೇ ಪ್ರತಿವಾದಿಗೆ 47,500/- ರೂಪಾಯಿಗಳನ್ನು ದಿನಾಂಕ 02-04-2003 ರಂದು ನೀಡಿರುತ್ತೇನೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಮಾಹಿತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು 57,500/- ರೂಪಾಯಿಗೆ ದಿನಾಂಕ 18-05-2002 ರಂದು ನನಗೆ ಖರೀದಿ ನೀಡಲು ಓಪ್ಪಿಕೊಂಡಿರುತ್ತಾನೆ ಎಂದು ನಾನು ಸುಳ್ಳು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ ಸದರಿ ವಿಷಯದ ಕುರಿತು 1 ನೇ ಪ್ರತಿವಾದಿಯು ನನಗೆ ಸಂಚಕಾರ ಪತ್ರ ಬರೆದು ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಸಂಚಕಾರ ಪತ್ರದ ಆದಾರದ ಮೇಲೆ ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನ ಮೇಲೆ ಬಂದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

11) ದಾವಾ ಆಸ್ತಿಗೆ 1 ನೇ ಪ್ರತಿವಾದಿ ಮಾಲೀಕನು ಇರುತ್ತಾನೆ ಎಂದರೆ ಸಾಕ್ಷಿಯು ಇದ್ದನು ನಂತರ ನನಗೆ ಬರೆದು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ನನ್ನ ದಾವೆಯಲ್ಲಿ ದಾವಾ ಆಸ್ತಿಯನ್ನು ಆತನಿಗೆ ಕಬ್ಜಾ ನೀಡಲು ಕೌಂಟರಕ್ಲೇಮ ಸಲ್ಲಿಸಿರುತ್ತಾನೆ ಎಂದರೆ ನನಗೆ ಮಾಹಿತಿ ಇಲ್ಲಾ. 1 ನೇ ಪ್ರತಿವಾದಿಗೆ ದಾವಾ ಆಸ್ತಿ ಬಿಟ್ಟು ಕೊಡಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸಾಕ್ಷಿಯು ನನಗೆ ಬೇರೆ ಯಾವುದೇ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಬೇರೆ ಮನೆ ಇರುವುದಿಲ್ಲ ಎಂದು ನಾನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ.

12) 1 ನೇ ಪ್ರತಿವಾದಿಯು ಕಡೂಬಡತನದಲ್ಲಿ ಇದ್ದು ಆತನಿಗೆ ಬೇರೆ ಯಾವುದೇ ಮನೆ ಇಲ್ಲದೇ ಇದ್ದು ದಾವಾ ಆಸ್ತಿಯ ಮೇಲೆ ಅವಲಂಬಿತವಿದ್ದು ಅದು ಆತನ ಅವಶ್ಯ

ವಾಸದ ಮನೆ ಇದ್ದು ಆತನಿಗೆ ನಾನು ದಾವಾ ಆಸ್ತಿಯನ್ನು ಬಿಟ್ಟು ಕೊಡುವ ಬಾಧ್ಯತೆ ಹೊಂದಿರುತ್ತೇನೆ ಅಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಯಾವುದೇ ಸಂಚಕಾರ ಪತ್ರ ಅಥವಾ ಕರಾರು ಪತ್ರ ಬರೆಯದೇ ಇದ್ದರು ಸಹ ನಾನು ಬರೆದು ಕೊಟ್ಟಿರುತ್ತಾನೆ ಹಾಗೂ ಹಣ ನೀಡಿರುತ್ತೇನೆ ಎಂದು ಸುಳ್ಳು ಕಾರಣಗಳನ್ನು ಕಾಣಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

13) ಸಾಕ್ಷಿಗೆ ಈಗ ನಿಪಿ–20 ರಿಂದ ನಿಪಿ–48 ಛಾಯಾಚಿತ್ರಗಳನ್ನು ತೋರಿಸಿ ಅದನ್ನು ನೋಡಿ ಸಾಕ್ಷಿಯು ಅವುಗಳನ್ನು ಛಾಯಾಗ್ರಾಹಕರು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಆಸ್ತಿಯ ಸಂಖ್ಯೆ ಇರುವುದಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ನಾನು ದಾವಾ ಆಸ್ತಿಯಲ್ಲಿ ಕಾರ್ಯಕ್ರಮಗಳನ್ನು ಮಾಡಿಸಿರುತ್ತೇನೆ ಎನ್ನುವ ಬಗ್ಗೆ ನಮೂದು ಮಾಡಿಲ್ಲ.

14) ಸಾಕ್ಷಿಗೆ ಈಗ ನಿಪಿ–1, ನಿಪಿ–2, ನಿಪಿ–18, ನಿಪಿ–19 ನ್ನು ತೋರಿಸಿ ಅದರಲ್ಲಿ 1ನೇ ಪ್ರತಿವಾದಿಯ ಹೆಸರು ನಮೂದು ಇರುತ್ತದೆ ಎಂದರೆ ಸರಿ. ನಿಪಿ–3 ರಲ್ಲಿ 2ನೇ ಪ್ರತಿವಾದಿ ಮಾಲೀಕರು ಎಂದು ನಮೂದು ಇರುತ್ತದೆ ಎಂದರೆ ಸರಿ. ನನಗೆ ಯಾವುದೇ ದಾವಾ ಕಾರಣ ಉಂಟಾಗಿಲ್ಲ 1ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ

<u>ಮರು ವಿಚಾರಣೆ ಃ ಇಲ್ಲ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**